Non-Payment of Grant-in-aid bills of Health Units run by T. D Bs.

590 SRI M. C. BASAPPA (Chamarajanagar).—Will the Minister for Health and Family Welfare be pleased to state

(a) whether it has come to the notice of the Government that Grant-in-aid bills of various Health Units run by the Taluk Development Boards are not being paid from the year 1975-76, 1976-77 and 1977-78;

(b) if so, the reasons for not making payment to these units ?

SRI M. MALLAPPA (Minister for Health and Family Welfare).—

(a) Grant-in-aid to Taluk Development Boards are now being paid as and when the applications along with the audited statement of expenditure are received. The quesition of payment of grant is interrelated to the question of taking over of Hospitals as one of the conditions in the Government Order of 25-4-78 expressly prohibited payment of back grants. Subsequently in view of the many representations from the Taluk Development Boards to relax this condition, Government have lifted this embargo. Now Granrs-in-aid are being released to the Taluk Development Boards as per rules and procedures.

(b) Does not arise.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ೧೯೭೫-೭೬, ೭೬-೭೭ ಹಾಗೂ ೭೭-೭೮ನೇ ಸಾಲುಗಳಿಂದ ತಾಲ್ಲೂಕು ಮಂಡಲಿಯವರು ನಡೆಸುತ್ತಿರುವ ಕೆಲವು ಆರೋಗ್ಯ ಘಟಕಗಳಿಗೆ ಸಹಾಯಕ ಅನುದಾನವನ್ನು ಪಾವತಿ ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

† ಶ್ರೀ ಎಂ. ಮಲ್ಲಪ್ಪ.—ನನ್ನ ಉತ್ತರದ ಕೊನೆಯ ಭಾಗದಲ್ಲಿ

"ತದನಂತರ ಈ ಪರತ್ತನ್ನು ಸಡಲಿಸುವಂತೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಂದ ಅನೇಕ ಮನವಿಗಳು ಬಂದಿದ್ದುದರಿಂದಾಗಿ ಸರ್ಕಾರದವರು ಈ ಪರತ್ತನ್ನು ತೆಗೆದು ಹಾಕಿದ್ದಾರೆ. ನಿಯಮ ಹಾಗೂ ಕಾರ್ಯ ವಿಧಾನಗಳ ಮೇರೆಗೆ ಈಗ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಸಹಾಯಕ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ"

ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ.—ಈ ಅನುದಾನವನ್ನು ಪಾವತಿ ಮಾಡುವುದನ್ನು ತಾರೀಖು ೨೫-೪-೭೮ ರಲ್ಲಿ ರದ್ದುಗೊಳಿಸಲಾಗಿದೆ. ಇದಕ್ಕೂ ಮುಂಚಿತವಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ನಡೆಸುತ್ತಿದ್ದ ಆಸ್ಪತ್ರೆಗಳಿಗೆ ಏತಕ್ಕೆ ಹಣ ಕೊಟ್ಟಿಲ್ಲ?

ಶ್ರೀ ಎಂ. ಮಲ್ಲಪ್ಪ.—ಆಡಿಟ್ ಸ್ಟೇಟ್‌ಮೆಂಟ್ ಮತ್ತು ಸಂಬಂಧಪಟ್ಟ ಬಿಲ್‌ಗಳನ್ನು ಕಳುಹಿಸಿಕೊಟ್ಟಿದ್ದರೆ ತಾನೇ ಅವನ್ನು ಪರಿಶೀಲನೆ ಮಾಡಿ ಸೂತ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ? ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಆಡಿಟ್ ಸ್ಟೇಟ್‌ಮೆಂಟ್ ಕಳುಹಿಸಿಕೊಡದಿದ್ದರೆ ಹೇಗೆ ಸಾಧ್ಯವೆಂದು ಹೇಳುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಸರ್ಕಾರದವರು ಹೆಲ್ತ್ ಯೂನಿಟ್‌ಗಳನ್ನು ಮಂಜೂರು ಮಾಡಿದಮೇಲೆ ಯಾವು ಯಾವುದಕ್ಕೆ ಎಷ್ಟೆಷ್ಟು ಹಣವನ್ನು ಕೊಡಬೇಕು ಅದರಂತೆ ಗ್ರಾಂಟನ್ನು ಏತಕ್ಕೆ ಕಳುಹಿಸಿಕೊಟ್ಟಿಲ್ಲ ವೆಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಯಾವು ಯಾವುದಕ್ಕೆ ವಿಷ್ಟು ಹಣ ಕೊಡಬೇಕೋ ಅಷ್ಟನ್ನು ಕೊಡುತ್ತಿದ್ದೇವೆ. ಮೆಡಿಸನ್ಸ್‌ಗೆ ಇಷ್ಟು ಕೊಡಬೇಕು ಎಂದು ಇರುತ್ತದೆ, ಬಾಕಿದಕ್ಕೂ ಇಷ್ಟಿಷ್ಟು ಹಣವನ್ನು ಕೊಡಬೇಕೆಂದು ಇರುತ್ತದೆ. ಅದರಂತೆ ಕೊಡುತ್ತಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ನನಗೆ ಬಂದಿರುವ ಇನ್‌ಫರ್‌ಮೇಷನ್ ಪ್ರಕಾರ ೧೯೭೫-೭೬, ೧೯೭೬-೭೭, ೧೯೭೭-೭೮ನೇ ಸಾಲಿಗೆ ಚಾಮರಾಜನಗರ ತಾಲ್ಲೂಕ್ ಬೋರ್ಡಿನ ಆಡಿಟ್ ಸ್ಟೇಟ್‌ಮೆಂಟ್‌ನಲ್ಲಿ ಕಳು ಹಿಸಿಕೊಟ್ಟಿದ್ದರೂ ಈವರೆಗೆ ಗ್ರಾಂಟ್ ಕೊಟ್ಟಿಲ್ಲವೆಂದು ತಿಳಿದು ಬಂದಿರುತ್ತದೆ. ಇದಕ್ಕೆ ಕಾರಣವೇನೆಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಆಡಿಟ್ ಸ್ಟೇಟ್‌ಮೆಂಟ್ ಮತ್ತು ಬಿಲ್‌ಗಳು ನಿಯಮಾನುಸಾರ ವಾಗಿ ಕಳುಹಿಸುವುದರಲ್ಲಿ ಏನಾದರೂ ವ್ಯತ್ಯಾಸವಾಗಿ ಈ ರೀತಿ ತೊಂದರೆಯಾಗಿರಬಹುದು. ನಿಯಮಾ ಳಿಯ ಪ್ರಕಾರ ಎಲ್ಲ ಸರಿಯಿದ್ದರೆ ಗ್ರಾಂಟನ್ನು ಕೊಡುವುದರಲ್ಲಿ ಯಾವ ತೊಂದರೆಯು ಇರುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ರಾಮಾಭಟ್.—ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಸರಿಯಿಲ್ಲವೆಂದು ಹೇಳುತ್ತೇನೆ. ಏತಕ್ಕೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕ್ ಬೋರ್ಡ್‌ನವರು ಆಡಿಟ್ ಸ್ಟೇಟ್‌ಮೆಂಟ್ ಕಳುಹಿಸಿಕೊಟ್ಟಿದ್ದಾರೆ. ಇನ್ನೂ ಗ್ರಾಂಟ್ ಕೊಟ್ಟಿಲ್ಲ. ಆಲ್ಲಿಯ ನೌಕರರಿಗೂ ಸಂಬಳ ವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿಲ್ಲ. ಇನ್ನೂ ಎಷ್ಟು ಸಮಯಬೇಕಾಗುತ್ತದೆಂದು ಕೇಳುತ್ತೇನೆ. ಮತ್ತು ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ, ಏನೆಂದರೆ ತದನಂತರ ಈ ಪರತ್ತನ್ನು ಸಡಿಲಿಸುವಂತೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಂದ ಅನೇಕ ಮನವಿಗಳು ಬಂದಿದ್ದುದರಿಂದಾಗಿ ಸರಕಾರದವರು ಈ ಷರತ್ತನ್ನು ತೆಗೆದುಹಾಕಿದ್ದಾರೆ. ನಿಯಮ ಹಾಗೂ ಕಾರ್ಯವಿಧಾನಗಳ ಮೇರೆಗೆ ಈಗ ತಾಲ್ಲೂಕು ಅಭಿ ವೃದ್ಧಿ ಮಂಡಳಿಗಳಿಗೆ ಸಹಾಯಕ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ಹೇಳಿರುವುದಕ್ಕೆ ಮಾನ್ಯ ಸಚಿವರು ಈಗ ಹೇಳುತ್ತಿರುವುದು ಸರಿಯಾದ ಉತ್ತರವಲ್ಲವೆಂದು ಹೇಳುತ್ತೇನೆ.

SRI M. MALLAPPA.—It is not a fact. As and when Taluk Development Boards present bills they will be scrutinised and paid. One thing I want to make clear. From the Taluk Development Boards schools have been taken over, hospitals have been taken over and back payments are made to them. What further action should be taken to make them run administration more efficiently ?

MR. SPEAKER.—I was also a President of the Taluk Development Board. On many occasions there has been delay in payments.

SRI M.C. BASAPPA.—We do not want any concession from the Government. As per the rules what they are entitled to may be given. Is it not a fact that the Taluk Boards are entitled for this payment ?

SRI M. MALLAPPA.—It is a concession shown by the Government According to the Government Order issued, no back payment shall be claimed by the Taluk Boards. But when they appealed to the Government, the Government gave a special concession in view of the fact that they want them to run administration more efficiently for the benefit of the people. Is it not a concession ?

SRI M.C. BASAPPA.—My point is the Government Order on taking over of hospitals was passed on 25-4-1978. I did not question why

you did not pay from that date. Prior to that date if certified statements were filed by T.D Bs. you have not paid.

SRI. M. MALLAPPA.—Prior to that they have not paid because the Government Order prohibit making back payments. Now they have relaxed. Subsequently they are making payments.

SRI M.C. BASAPPA.—I do not refer the claims from the date of the order. Prior to that for three years, 1975-76, 1976-77 and 1977-78, audited accounts have been submitted and the Taluk Boards have made claim. Still payments are not made by the Government. Are there specific reasons for not paying the amount ?

ಶ್ರೀ ಎಂ. ಮಲ್ಲಪ್ಪ.—ಈಗ ಯಾವ ಸಾಲಿಗೆ ಆಡಿಟ್ ಅಕೌಂಟ್ಸ್ ಕಳುಹಿಸಿ ಕೊಟ್ಟಿರುತ್ತಾರೆ ಅದಕ್ಕೆ ಪೇಮೆಂಟ್ಸ್ ಮಾಡುತ್ತೇವೆ. ಹಣ ಕೊಡದಿರುವುದಕ್ಕೆ ಸರ್ಕಾರದಿಂದ ವಿಳಂಬವಾಗುತ್ತಿರುವುದಕ್ಕೆ ಅವರೇ ಕಾರಣರಿರುತ್ತಾರೆ.

ಅಧ್ಯಕ್ಷರು.—ಮಾನ್ಯ ಬಸಪ್ಪನವರು ೨೫-೪-೧೯೭೮ ರಿಂದ ಈಚೆಗೆ ಯಾವುದಾದರೂ ಬಿಲ್ಸ್ ಪೇಮೆಂಟ್ ಆಗಬೇಕಾದ್ದು ಇದ್ದರೆ ಅದನ್ನು ಕೊಡಿಸುತ್ತಿರಾ ಎಂದು ಕೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—ಈಗ ಕೊಡುತ್ತಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಅವರು ಕೊಡತಕ್ಕಂಥ ಪ್ರಶ್ನೆ ಬರುವುದಿಲ್ಲ. ತಾಲ್ಲೂಕು ಬೋರ್ಡ್ ಆಸ್ಪತ್ರೆಗಳನ್ನು ಸರ್ಕಾರದವರು ತೆಗೆದುಕೊಂಡು ೫ ವರ್ಷಗಳಾಯಿತು ಇನ್ನೂ ಪರೆಗೆ ಗ್ರಾಂಟ್ಸ್ ಕೊಟ್ಟಿಲ್ಲ It does not relate to those payments. My question relates to the period prior to the date of G.O.

SRI M. MALLAPPA.—They were more particular for the Government to take over the dispensaries into their fold. That is why they did not insist on payment. In October 1978 the Government have passed order stating that no back payment shall be claimed by the Taluk Boards, Municipalities. This order was issued in concurrence with the Finance Department. Even after this they are coming with the bills and the Government is considering them.

ಶ್ರೀ ಎಂ. ಸಿ. ಬಸಪ್ಪ.—ನಾನು ಕೇಳುತ್ತಾ ಇರತಕ್ಕಂಥ ಪ್ರಶ್ನೆ ೨೫-೪-೭೮ ರಿಂದ ಆಸ್ಪತೆಗಳನ್ನು ಸರ್ಕಾರದವರು ವಶಕ್ಕೆ ತೆಗೆದುಕೊಂಡಮೇಲೆ ಗ್ರಾಂಟ್‌ಗಳನ್ನು ಕೊಡುವುದಿಲ್ಲವೆಂದು ಸರ್ಕಾರದ ಆರ್ಡರ್ ಇರುತ್ತದೆ. ಅಲ್ಲಿಂದ ಈಚೆಗೆ ಕೊಡಿ ಎಂದು ಕೇಳುತ್ತಿಲ್ಲ, ಹಿಂದಿನ ವರ್ಷಗಳ ಮೂರು ವರ್ಷಗಳದ್ದು ಆಡಿಟ್ ಅಕೌಂಟ್ಸ್, ಸರ್ಟಿಫಿಕೇಟ್ ಎಲ್ಲವನ್ನು ಕಳುಹಿಸಿದ್ದಾರೆಗ್ಗೂ ಸರ್ಕಾರದವರು ಗ್ರಾಂಟನ್ನು ಕೊಟ್ಟಿಲ್ಲ ಈರೀತಿಯಾಗಿ ಡಿಲೆಯಾಗುತ್ತಿರುವುದಕ್ಕೆ ಸ್ಪೆಸಿಫಿಕ್ ರೀಸನ್ಸ್ ಏನು. ಮತ್ತು ಚಾಮರಾಜನಗರಕ್ಕೆ ಮೂರು ವರ್ಷಗಳಿಂದ ಕೊಡದಿರುವುದಕ್ಕೆ ಏನಾದರೂ ಸ್ಪೆಸಿಫಿಕ್ ರೀಜನ್ಸ್ ಇದೆಯೇ.

ಶ್ರೀ ಎಂ. ಮಲ್ಲಪ್ಪ.—ಪ್ರಶ್ನೆ ಕೇಳಿರುವುದು ಜನರಲ್ ಆಗಿ ಇರುವುದರಿಂದ ಉತ್ತರದಲ್ಲಿ ಹೇಳಿರುತ್ತೇನೆ. ಚಾಮರಾಜನಗರಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದರೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಮುಂದೆ ಆಡಿಟ್ ಅಕೌಂಟ್ಸ್ ಕಳುಹಿಸಿಕೊಟ್ಟರೆ ಜಾಗ್ರತೆಯಾಗಿ ಕೊಡತಕ್ಕಂಥ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.—ಈಗ ಪೇಮೆಂಟ್ ಮಾಡುತ್ತಿದ್ದೇವೆ. Further payments are made as and when bills are presented.